



ಅಂಡಮಾನ್ ಎನ್ನುವುದು ಭಾರತದ ಪರಿಸರ ಸಂಪುಟದಲ್ಲಿನ ಒಂದು ವಿಸ್ಮಯ. ಇಲ್ಲಿನ ಹಲವು ದ್ವೀಪಗಳು ತಮ್ಮ ಸೌಂದರ್ಯದಿಂದಷ್ಟೇ ಗಮನಸೆಳೆಯುವುದಿಲ್ಲ – ಜೀವ ವೈವಿಧ್ಯದಿಂದಲೂ ಪ್ರಾಕೃತಿಕ ವಿಸ್ಮಯದಿಂದಲೂ ಗಮನಸೆಳೆಯುತ್ತವೆ. ಮನುಷ್ಯರ ಪ್ರವೇಶಕ್ಕೆ ದುರ್ಗಮವಾದ ಹೆಮ್ಮರಗಳುಳ್ಳ ಕಾಡುಗಳು, ಪರಿಶುಭ್ರ ಮರಳಿನ ತೀರಗಳು, ಸುಣ್ಣದ ಕಲ್ಲಿನ ಗುಹೆಗಳು, ಹೊರಜಗತ್ತಿನ ಜೊತೆ ಸಂಪರ್ಕವಿಲ್ಲದೆ ಬದುಕುತ್ತಿರುವ ಮೂಲನಿವಾಸಿಗಳು, ದೇಶದ ಏಕೈಕ ಜೀವಂತ ಜ್ವಾಲಾಮುಖಿ, ಜಗತ್ತಿನಲ್ಲಿ ಬೇರೆಲ್ಲೂ ಕಾಣಬರದ ಅನೇಕ ಜೀವಸಂಕುಲಗಳು – ಹೀಗೆ, ಅಂಡಮಾನ್ ಎನ್ನುವುದು ಅನೇಕ ವೈಶಿಷ್ಟ್ಯಗಳ ಗುಚ್ಛ.

ಹವಳದ ರಚನೆಗಳನ್ನು ಅತ್ಯಂತ ಸಮೀಪದಿಂದ ಸ್ವಚ್ಛ ಪರಿಸರದಲ್ಲಿ ಅತ್ಯುತ್ತಮ ಸ್ಥಿತಿಯಲ್ಲಿ ನೋಡಬೇಕೆಂಬ ನಮ್ಮ ಬಹುದಿನದ ಆಕಾಂಕ್ಷೆಯನ್ನು ಈಡೇರಿಸಿದ್ದು ಅಂಡಮಾನಿನ 'ಜಾಲಿಬಾಯ್' ದ್ವೀಪ. ಭಾರತದ ಕರಾವಳಿ ಪ್ರದೇಶದಲ್ಲಿ ನಾವು ಸ್ವಚ್ಛ ಸಮುದ್ರತೀರವನ್ನು ಕಾಣುವುದೇ ದುರ್ಲಭ. ಮನುಷ್ಯ ಹಾಗೂ ಕೈಗಾರಿಕಾ ಮಾಲಿನ್ಯಗಳು, ತ್ಯಾಜ್ಯ ವಸ್ತುಗಳು, ನಾಯಿ, ದನಗಳ ಓಡಾಟ ಮತ್ತು ನಿರಂತರ ಮಾನವಚಟುವಟಿಕೆಗಳಿಂದ ಸಮುದ್ರತೀರಗಳು ಗಿಜಿ ಗಿಜಿ ಎನ್ನುತ್ತಿರುತ್ತವೆ. ಹಲವೆಡೆ ಊರುಗಳ ಗಟಾರದಿಂದ ಹರಿದುಬರುವ ಕಪ್ಪುನೀರು, ಮಲ, ಮೂತ್ರ, ಕಸ ಕೊಳಕು ತುಂಬಿಕೊಂಡು ಮೂಗು ಮುಚ್ಚಿಕೊಳ್ಳಲು ಪ್ರೇರಣೆ ನೀಡುವುದೂ ಉಂಟು. ಅಂಡಮಾನಿನ ತೀರಗಳು ಹಾಗಲ್ಲ. ರಾಜಧಾನಿ ಪೋರ್ಟ್‌ಬ್ಲೇರ್ ಸುತ್ತಮುತ್ತಲ ಹೊರತಾಗಿ ಸಮುದ್ರ ತನ್ನ ಶುಭ್ರತೆಯಿಂದ ಮನಸೆಳೆಯುತ್ತದೆ. ಪ್ರವಾಸಿಗರಿಗೆ ಕಟ್ಟುನಿಟ್ಟಾದ ಕೆಲವು ನಿಯಮಗಳು ಜಾರಿಯಲ್ಲಿರುವುದರಿಂದ ಕಡಲ ಪರಿಸರ ಕಸ ಮುಕ್ತವಾಗಿದೆ. ಕೆಲವು ಹವಳದ ದ್ವೀಪಗಳಲ್ಲಂತೂ ನಿಯಮಗಳು ಕೊಂಚ ಹೆಚ್ಚೇ ಕಠಿಣವಾಗಿವೆ ಎನ್ನಬಹುದು. ಹಾಗಿರುವುದರಿಂದ ಹವಳದ ಜೀವಿಗಳ ಅಸ್ತಿತ್ವಕ್ಕೆ ಇಲ್ಲಿ ಧಕ್ಕೆಯಾಗಿಲ್ಲ.

## ಜಾಲಿಬಾಯ್ - ರೆಡ್‌ಸ್ಕಿನ್

ಅಂಡಮಾನಿನ ಎರಡು ಪ್ರಮುಖ ಹಾಗೂ ಪ್ರವಾಸಿಗರು ಭೇಟಿ ನೀಡಲು ಸುಲಭವಿರುವಂತಹ ಹವಳದ ದ್ವೀಪಗಳೆಂದರೆ ಜಾಲಿಬಾಯ್ ಮತ್ತು ರೆಡ್‌ಸ್ಕಿನ್ ದ್ವೀಪಗಳು. ವರ್ಷದಲ್ಲಿ ಆರು ತಿಂಗಳು ಜಾಲಿಬಾಯ್‌ಗೆ ಪ್ರವೇಶವಿದ್ದರೆ, ಇನ್ನಾರು ತಿಂಗಳು ರೆಡ್‌ಸ್ಕಿನ್ ಪ್ರವೇಶಕ್ಕೆ ಅವಕಾಶವಿರುತ್ತದೆ. ಒಂದೇ ಪ್ರವಾಸದಲ್ಲಿ ಎರಡನ್ನೂ ನೋಡುವುದು ಸಾಧ್ಯವಿಲ್ಲ. ವರ್ಷಪೂರ್ತಿ ಜನರ ಭೇಟಿಯಿಂದ ಹವಳದ ಪರಿಸರಕ್ಕೆ ಯಾವುದೇ ಅಡ್ಡಿಯಾಗಬಾರದೆಂದು ಈ ನಿಯಮವನ್ನು ಅನುಸರಿಸಲಾಗುತ್ತದೆ. ಮನುಷ್ಯರ ಹಾಜರಾತಿ ಇಲ್ಲದ ಈ ಆರು ತಿಂಗಳ ಅವಧಿಯಲ್ಲಿ ನಮ್ಮಿಂದ ಜರುಗಿರಬಹುದಾದ ಅಗೋಚರ ದುಷ್ಪರಿಣಾಮಗಳನ್ನು ಸರಿಪಡಿಸಿಕೊಳ್ಳಲು ಪ್ರಕೃತಿಗೆ ಸಾಧ್ಯವಾಗುತ್ತದೆ. ಇದೊಂದು ಅತ್ಯಂತ ವೈಜ್ಞಾನಿಕ ಕ್ರಮ ಎನ್ನಬಹುದು.

ನಮಗೆ ಜಾಲಿಬಾಯ್ ದ್ವೀಪವನ್ನು ಸಂದರ್ಶಿಸುವ ಅವಕಾಶ ಸಿಕ್ಕಿತು. ವಾವ್! ಅದೊಂದು ಸುವರ್ಣಾವಕಾಶವೇ ಸರಿ. ನಮ್ಮ ಒರಟು ಕಾಲಿಡಲು ಮನಸೇ ಬಾರದ ಒಂದು ಚೂರೂ ಕಸವಿಲ್ಲದ ನವಿರು ಬಿಳಿ ಮರಳ ತೀರ. ದೃಷ್ಟಿ ಹಾಯುವ ತನಕವೂ ನೀಲಿ–ಹಸಿರು ಬಣ್ಣಗಳನ್ನು ಪ್ರತಿಫಲಿಸುವ ನೀರಿನ ರಾಶಿ ಕಂಡು ಕುಣಿದಾಡುವಷ್ಟು ಖುಷಿಯಾಯಿತು.

ಇಷ್ಟು ಸ್ವಚ್ಛವಾಗಿ ಸಮುದ್ರ ಇರಬಲ್ಲುದು ಎಂದು ನಮಗೆ ತಿಳಿದದ್ದು ಇದೇ ಮೊದಲನೇ ಬಾರಿಯಾಗಿತ್ತು. ದ್ವೀಪವಂತೂ ಪೂರ್ತಿ ದಟ್ಟ ಅರಣ್ಯದಿಂದ ತುಂಬಿಹೋಗಿತ್ತು. ಸಾಗರ ಜೀವಿಗಳನ್ನು ಗಾಜಿನ ತಳವಿರುವ ದೋಣಿಯಲ್ಲಿ ಕುಳಿತು ತೃಪ್ತಿಯಾಗುವಷ್ಟು ನೋಡಿದೆವು.

## ಸಾಗರವೇ ಕನ್ನಡಿಯಾದಾಗ...

ಇಪ್ಪತ್ತು ಅಡಿ ಆಳದ ಸಮುದ್ರ ತಳ ಮತ್ತು ಜೀವಿಗಳೆಲ್ಲ ಮೂರ್ನಾಲ್ಕು ಅಡಿಗಳಷ್ಟು ಹತ್ತಿರ ಬಂದಿವೆಯೇನೋ ಅನ್ನಿಸುವಷ್ಟು ವರ್ಧಿಸಿ ತೋರಿಸುವ ದೋಣಿಯ ಗಾಜಿನ ಮೂಲಕ ನೋಡುವುದು ಕುತೂಹಲಕರವಾಗಿರುತ್ತದೆ. ಬಗೆಬಗೆ ಬಣ್ಣದ ಮೀನುಗಳು, ಸಮುದ್ರ ಸೌತೆ, ಸೀ ಅರ್ಚಿನ್, ಅನಿಮೋನ್‌ಗಳು, ಬಗೆ ಬಗೆ ಆಕಾರದ ಹವಳಗಳು, ನಕ್ಷತ್ರ ಮೀನುಗಳು, ಮೃದ್ವಂಗಿಗಳು, ಆಲ್ಗೆ ಸಸ್ಯಗಳು... ಓಹ್! ಒಂದೇ ಎರಡೇ ನಮಗೆ ಕಂಡದ್ದು!

ಜಾಲಿ ಬಾಯ್‌ನಲ್ಲಿನ ಸ್ಕೂಬಾ ಡೈವಿಂಗ್ ಕೂಡಾ ಅವಿಸ್ಮರಣೀಯವೇ. ಸಮುದ್ರದ ನೀರಿಗೆ ಬಿದ್ದರಂತೂ ಕೇಳುವುದೇ ಬೇಡ. ನಮ್ಮ ಬೆವರು ಎಲ್ಲಿ ನೀರನ್ನು ಕೆಡಿಸೀತೋ ಎಂಬ ಭಾವನೆ ಮೂಡುವಷ್ಟು ಸ್ಫಟಿಕದಂತೆ ಬೆಳಗುವ ಕಡಲನೀರಿನಲ್ಲಿ ಗಂಟೆಗಟ್ಟಲೆ ಮುಳುಗೇಳುತ್ತಿರಬೇಕು ಎನಿಸುತ್ತದೆ. ನಾಲ್ಕಾರು ಗಂಟೆ ಜಾಲಿಬಾಯ್ ದ್ವೀಪದಲ್ಲಿ ಕಳೆದು ಮರಳಿದಾಗ ಏನನ್ನೋ ಕಳೆದುಕೊಂಡ ಅನುಭವ. ಯಾಕೆ ಇಂತಹ ದ್ವೀಪದಲ್ಲಿ ಒಂದು ಮನೆ ಮಾಡಿಕೊಂಡು ಬದುಕುವ ಅವಕಾಶ ಸಿಗಬಾರದಿತ್ತು ಎಂದು ಆ ದಿವಸ ಅನಿಸಿದ್ದನ್ನು ಮರೆಮಾಚಲಾರೆ.

## ಪ್ಲಾಸ್ಟಿಕ್ ಮುಕ್ತ ಮುಕ್ತ!

ಜಾಲಿಬಾಯ್‌ನಲ್ಲಿ ತಿನ್ನಲು ಕುಡಿಯಲು ಏನೂ ಸಿಕ್ಕುವುದಿಲ್ಲ. ನಾವೇ ಎಲ್ಲವನ್ನು ಒಯ್ಯಬೇಕು. ನೆನಪಿರಲಿ, ನಾವು ಏನನ್ನೂ ಪ್ಲಾಸ್ಟಿಕ್ ಕಂಟೇನರ್‌ಗಳಲ್ಲಿ ಒಯ್ಯುವಂತಿಲ್ಲ, ಇದು ಕಡ್ಡಾಯ. ಜಾಲಿಬಾಯ್ ಸಂಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶ. ತ್ಯಾಜ್ಯವನ್ನು ನಮ್ಮೊಡನೆಯೇ ವಾಪಸ್ ತರಬೇಕು. ಸುತ್ತಾಟ, ಈಜಾಟ, ಮುಳುಗು ಕ್ರೀಡೆಗಳನ್ನೆಲ್ಲ ಮುಗಿಸಿ ಮಧ್ಯಾಹ್ನ 2.30ರ ಹೊತ್ತಿಗೆ ವಂಡೂರಿಗೆ ಮರಳುತ್ತೇವೆ.

ಜಾಲಿಬಾಯ್ ಮತ್ತು ರೆಡ್‌ಸ್ಕಿನ್ ದ್ವೀಪಗಳು 281.5 ಚ.ಕಿ.ಮೀ. ವಿಸ್ತೀರ್ಣವಿರುವ 'ಮಹಾತ್ಮಾ ಗಾಂಧೀ ಸಾಗರ ರಾಷ್ಟ್ರೀಯ ಉದ್ಯಾನವನ'ದ ವ್ಯಾಪ್ತಿಯಲ್ಲಿ ಬರುತ್ತವೆ. ಇಲ್ಲಿರುವ ಮಾನವರಹಿತ ಸುಮಾರು 17 ದ್ವೀಪಗಳಲ್ಲಿ ಈ ಎರಡು ದ್ವೀಪಗಳಿಗೆ ಮಾತ್ರ ಭೇಟಿಯ ಅವಕಾಶವಿದೆ.

ಜಾಲಿಬಾಯ್ ಮತ್ತು ರೆಡ್‌ಸ್ಕಿನ್ ದ್ವೀಪಗಳಿಗೆ ಭೇಟಿ ನೀಡುವುದಿದ್ದರೆ ಆನ್‌ಲೈನಿನಲ್ಲಿ ಫೆರ್ರಿ ಟಿಕೇಟು ಕಾಯ್ದಿರಿಸಿಕೊಂಡರೆ ನಿಂತು ಕಾಯುವ ಅವಕಾಶವಿರುವುದಿಲ್ಲ.

### ತಲುಪುವುದು ಹೇಗೆ?

ರಾಜಧಾನಿ ಪೋರ್ಟ್‌ಬ್ಲೇರ್‌ನಿಂದ 30 ಕಿ.ಮೀ. ಪೂರ್ವಕ್ಕಿರುವ ವಂಡೂರ್ ಜೆಟ್ಟಿಗೆ ಟ್ಯಾಕ್ಸಿ ಅಥವಾ ಸರ್ಕಾರಿ ಬಸ್ಸಿನಲ್ಲಿ ಪಯಣಿಸಬಹುದು. ಬೆಳಿಗ್ಗೆ 9ಕ್ಕೆ ಫೆರ್ರಿ ಸರ್ವೀಸ್ ಶುರುವಾಗುತ್ತದೆ. ವಂಡೂರಿನಿಂದ 30–45 ನಿಮಿಷದ ಪ್ರಯಾಣ.